**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 56/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಎಸ್.ಆರ್.ಸಂತೋಷ ಕುಮಾರ | ಪಿಡಬ್ಲ್ಯೂ- 01 |
| ತಂದೆಯ ಹೆಸರು | - ಲೇಟ್ ರಂಗನಾಥ | ಸಿಡಬ್ಲ್ಯೂ - 01 |
| ವಯಸ್ಸು | - 35 ವರ್ಷ | |
| ಉದ್ಯೋಗ | - ಉಪವಲಯ ಅರಣ್ಯಾಧಿಕಾರಿ, ಮುತ್ತೋಡಿ ವಲಯ | |
| ವಾಸ ಸ್ಥಳ | - ಚಿಕ್ಕಮಗಳೂರು | |

**(1 ರಿಂದ 3 ನೇ ಆರೋಪಿತರನ್ನು ಈ ದಿನ Google meet ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಚಿಕ್ಕಮಗಳೂರಿನ ಜಿಲ್ಲಾ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿತರಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)**

ದಿನಾಂಕಃ 14.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ-

1. ನಾನು 2019 ರಿಂದ ಮೇ 2025 ರವರೆಗೆ ಕಡೂರು ಉಪವಲಯದಲ್ಲಿ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರಿರುವ 1 ರಿಂದ 3 ನೇ ಆರೋಪಿ ಗೊತ್ತು. 4 ನೇ ಆರೋಪಿ ನ್ಯಾಯಾಲಯದ

ಮುಂದಿರುತ್ತಾನೆ.

3. ದಿಃ 15-07-2020 ರಂದು ಕಡೂರು ವಲಯದ ಎಮ್ಮೆದೊಡ್ಡಿ ಶಾಖೆಯ ಎಮ್ಮೆದೊಡ್ಡಿ ಗ್ರಾಮದ ಹುಲಿ ಸಂರಕ್ಷಿತ ಪ್ರದೇಶದ ಶಕುನಗಿರಿ ಗುಡ್ಡದ ಸರ್ವೆ ನಂಬರು 70 ರಲ್ಲಿ ನಾನು ಚಾಸಾ.2 ರಿಂದ 4 ರವರೊಂದಿಗೆ ಗಸ್ತು ತಿರುಗುತ್ತಿದ್ದಾಗ ಮಧ್ಯಾಹ್ನ 2-2.30 ಗಂಟೆಗೆ ಮರ ಕಡಿಯುತ್ತಿದ್ದ ಶಬ್ಧ ಕೇಳಿಬಂತು. ನಾವು ಮರ ಕಡಿಯುತ್ತಿದ್ದ ಸ್ಥಳದ ಹತ್ತಿರಕ್ಕೆ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಮರ ಕಡಿಯುತ್ತಿದ್ದ ವ್ಯಕ್ತಿಗಳಲ್ಲಿ 3 ಜನರು ಓಡಿ ಹೋಗಲು ಪ್ರಯತ್ನಿಸಿದರು. ಸದರಿ ವ್ಯಕ್ತಿಗಳು ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಇರುತ್ತಾರೆ.

4. ನಾವು 4 ಜನರು ಸೇರಿ 3 ಜನರನ್ನು ಹಿಡಿದು ಕರೆತಂದು ನೋಡಿದಾಗ ಆ 3 ಜನರು ಅರಣ್ಯದಲ್ಲಿ ಒಂದು ಗುಡಿಸಲನ್ನು ಕಟ್ಟಿಕೊಂಡಿದ್ದರು. ಗುಡಿಸಲಿನ ಸುತ್ತಮುತ್ತ ಅಜಮಾಯಿಸಿ ನೋಡಿದಾಗ ಒಂದು ಚೀಲದಲ್ಲಿ ಏನೋ ಇಟ್ಟಿರುವುದನ್ನು ಗಮನಿಸಿದೆವು. ಅದನ್ನು ತೆಗೆದು ನೋಡಲಾಗಿ ಅದರಲ್ಲಿ ಕೆಲವೊಂದು ಮರದ ತುಂಡುಗಳು ಇದ್ದು, ಅವುಗಳ ವಾಸನೆ ಮತ್ತು ರಚನೆಯಿಂದ ಅವುಗಳು ಶ್ರೀಗಂಧ ಮರದ ತುಂಡುಗಳು ಎಂದು ಕಂಡುಬಂದವು. ಅವರು ಮರ ಕಡಿಯುತ್ತಿದ್ದ ಜಾಗವನ್ನು ನೋಡಿದಾಗ ಅಲ್ಲಿ 2 ದೊಡ್ಡ ಮರದ ತುಂಡುಗಳು ಇದ್ದವು. ಅವುಗಳ ರಚನೆ ಮತ್ತು ವಾಸನೆಯಿಂದ ಅವುಗಳು ಸಹ ಶ್ರೀಗಂಧದ ಮರದ ತುಂಡುಗಳು ಎಂದು ಕಂಡುಬಂದವು. ಅವುಗಳ ಸುತ್ತಮುತ್ತ ಮರಗಳನ್ನು ಕಡಿಯಲು ಉಪಯೋಗಿಸಿದ ಗರಗಸ, ಕತ್ತಿ, ಹಾರೆ ಮತ್ತು ಅರ ಇದ್ದವು. ಅಲ್ಲಿ ಜೀವನ ಮಾಡಲು ಅವಶ್ಯಕತೆ ಇರುವ ಪಾತ್ರೆ ಮತ್ತು ನೀರು ಇತ್ತು, ಆದರೆ ದಿನಸಿ ಕಂಡುಬರಲಿಲ್ಲ.

5. ಅರಣ್ಯ ಪ್ರದೇಶವಾಗಿದ್ದುದ್ದರಿಂದ ಅಲ್ಲಿ ಯಾರು ಪಂಚರು ಸಿಗದೇ ಇದ್ದುದ್ದರಿಂದ ಚಾಸಾ.2 ರಿಂದ 4 ರವರನ್ನು ಪಂಚರನ್ನಾಗಿ ಮಾಡಿಸಿ ಅಲ್ಲಿ ಒಟ್ಟು 29 ಮುದ್ದೆಮಾಲುಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1(ಎ) ಎಂದು ಮತ್ತು ಅದರಲ್ಲಿರುವ ಚಾಸಾ.2 ರಿಂದ 4 ರವರ ಸಹಿಗಳನ್ನು ನಿಪಿ.1(ಬಿ) ರಿಂದ ಪಿ.1(ಡಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಕಛೇರಿಯಿಂದ ಸಂಖ್ಯೆಯನ್ನು ಪಡೆದುಕೊಂಡಿರುತ್ತೇನೆ.

6. ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

**(**ಮುದ್ದೆಮಾಲುಗಳನ್ನು ಗುರುತಿಸುವ ಸಲುವಾಗಿ ಮಾನ್ಯ ಪಿ.ಪಿ.ರವರ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ